ಪ್ರಬಂಧ

# ಎನ್ನ ಮೂಗನ ಮಾಡಯ್ಯ ತಂದೆ



**ಸ್ಮಿತಾ ಅಮೃತರಾಜ್**

ಕಲೆ: ಪ್ರಭಾಕರ ಹೆಗಡೆ

ಮೊನ್ನೆ ಮಧ್ಯಾಹ್ನ ಒಂದು ಕೋಳಿ ನಿದ್ದೆಯ ಧ್ಯಾನಕ್ಕೆ ಬಿದ್ದಿದ್ದೆ. ಆ ಅಪೂರ್ವ ಕ್ಷಣಗಳಿಗೆ ಒಡ್ಡಿಕೊಳ್ಳುವ ಸುಖವೇ ಬೇರೆ. ಉಂಡಾದ ನಂತರ ದಿಂಬಿಗೊರಗುವುದು ಒಂದು ಚಟವಾಗಿ ಬಿಟ್ಟರೆ ಅದೊಂದು ರೀತಿಯ ಅಮಲು. ಈ ಸಣ್ಣ ಅಮಲು ನರನಾಡಿಗಳಲ್ಲಿ ವ್ಯಾಪಿಸಿ ಒಂದು ರೀತಿಯ ಅನಿರ್ವಚನೀಯ ಜೋಂಪಿನಲ್ಲಿ ತೇಲಾಡುತ್ತಿರುವಾಗ ಯಾರಾದರೂ ಕರೆ ಮಾಡಿದರೆ ಹೇಗಾಗಬೇಡ?

ಫೋನು ರಿಂಗಾಗುತ್ತಿದೆ... 'ಹಲೋ... ಯಾರು?' ನಾನು ಅರೆ ಮಂಪರಿನಲ್ಲಿಯೇ ಪ್ರಶ್ನಿಸುತ್ತಿದ್ದೇನೆ. ಅತ್ತಲಿನಿಂದ, 'ನಾವು... ಇಲ್ಲಿಂದ... ಇಂತವರು...' ಅಂದಾಕ್ಷಣ ನಿದ್ರೆ ಪೂರ ಹಾರಿ ಹೋಗಿ, 'ಹ್ಞಾಂ... ಸರ್... ನಮಸ್ತೆ... ನಮಸ್ತೆ, ಸರಿ, ಹೇಳಿ ಸರ್'

'ಮೇಡಂ... ಚೆನ್ನಾಗಿದ್ದೀರ ತಾನೇ? ಯಾಕೋ ವಾಯ್ಸ್ ಸಣ್ಣಕೆ ಡಲ್ ಕೇಳಿಸ್ತಿದೆ.'

ದೇವರೇ. ನಾ ನಿದ್ದೆ ಮಾಡ್ತಿದ್ದೆ ಅಂತ ಹೆಂಗೆ ಹೇಳೋದು ಅವರಿಗೆ. ಈ ಮಟ ಮಟ ಮಧ್ಯಾಹ್ನದಲ್ಲಿ ನಾವೆಲ್ಲ ಕೆಲಸದ ತುರ್ತಿನಲ್ಲಿ ಇರಬೇಕಾದರೆ ಇವಳು ನಿದ್ದೆ ಹೊಡಿತಾ ಇದ್ದಾಳಲ್ಲ ಅಂತ ಅಸೂಯೆ ಹುಟ್ಟಿ, ದೃಷ್ಟಿ ಬಿದ್ದು ಮತ್ತೆ ನನಗದು ತಟ್ಟಿ ಬಿಟ್ಟರೆ! ತಕ್ಷಣ ತಡಬಡಿಸಿಕೊಂಡು, 'ಹಂಗೇನಿಲ್ಲ ಸರ್, ಏನೋ ನೆಟ್ ವರ್ಕ್ ಸಮಸ್ಯೆ. ಹೇಳಿ ಸರ್, ಈಗ ಸರಿ ಕೇಳಿಸ್ತಿದೆ.'

'ಏನಿಲ್ಲ, ನಾಡಿದ್ದು ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ, ನೀವು ಬರಬೇಕು.'

'ಹೋ... ಅದಕ್ಕೇನಂತೆ'

ಒಮ್ಮೆ ಈ ಸಂಭಾಷಣೆಯಿಂದ ನುಣುಚಿಕೊಂಡು ಮತ್ತೈದು ನಿಮಿಷ ನಿದ್ರೆಗೆ ಸಮಯ ಸಿಕ್ಕಿದರೆ ಸಾಕೆಂಬಂತೆ ಅವಸರಿಸುತ್ತಾ, 'ಸರಿ ಸರಿ ಆಗಲಿ' ಅಂತ ಹೇಳಿ ಫೋನು ಇಡುವ ಅವಸರಕ್ಕೆ ನಾನು ಬಿದ್ದರೆ... 'ಇರಿ ಮೇಡಂ, ವಿಷಯ ಮೊದಲು ಹೇಳಿ ಬಿಡುವೆ..' ಅಂತ ಅವರು ಮಾತು ಮುಂದುವರೆಸುವ ಆಲೋಚನೆಯಲ್ಲೇ ಇದ್ದಾರೆ. ಇವತ್ತಿನ ಕೋಳಿ ನಿದ್ದೆಯ ಬಾಯಿಗೆ ಮಣ್ಣು ಅಂತ ಶಪಿಸುತ್ತಾ ಸ್ವಲ್ಪ ಅಲರ್ಟ್ ಆಗಿ ಕುಳಿತುಕೊಂಡು ಸರಿಯಾಗಿ ಫೋನು ಕಿವಿಗೆ ನೆಟ್ಟು ಕೇಳುವಷ್ಟರಲ್ಲಿ... 'ನಿಮ್ಮದೊಂದು ಟಾಕ್ ಇದೆ ಅವತ್ತು.'

ಅಷ್ಟಕ್ಕೇ ಎದೆ ಟಕಟಕ ಬಡಿದುಕೊಳ್ಳತೊಡಗಿತು.

ರಾಮ... ಶಿವನೇ... ಇದೊಳ್ಳೆ ಪಜೀತಿ ಆಯ್ತಲ್ಲ. ಏನು ಮಾಡಲಿ? ತಪ್ಪಿಸಿಕೊಳ್ಳದೆ ವಿಧಿ ಇಲ್ಲ ಈಗ. ಮನಸ್ಸು ತಪ್ಪಿಸುವ ದಾರಿಗಳಿಗಾಗಿ ಸ್ಕೆಚ್ ಹಾಕತೊಡಗಿತು.

'ಅಯ್ಯೊ... ಆ ಡೇಟಿಗೆ ನಂಗೆ ಬರುದು ಕಷ್ಟ ಸರ್. ಮೊದಲ ದಿವಸ ಅಲ್ಲಿಗೆ ಹೋಗಲಿದೆ, ನಂತರದ ದಿವಸ ಇನ್ನೆಲ್ಲಿಗೋ ಹೋಗಲಿದೆ' ಅಂತ ಡೇಟ್ ಫಿಕ್ಸಿನ ಕುರಿತು ಮಾಹಿತಿ ಹೇಳುತ್ತಾ, 'ಸರ್ ಹಿಂಗಿರುವಾಗ ಪ್ರತೀದಿನ